

بسم اللهِ الرّحمٰن الرّحيم

# ಲೋಕವು ಈಗ ಒಂದು ಅಗ್ನಿ ಕುಂಡದ ಸಮೀಪ ಬಂದು ನಿಂತಿದೆ
# ಅದಕ್ಕೆ ಬೀಳುವುದರಿಂದ ಲೋಕವನ್ನು ನಾವು ಸಂರಕ್ಷಿಸಬೇಕಾಗಿದೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 11–12–2015 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕೆಲವು ದಿನಗಳ ಹಿಂದೆ ಇಲ್ಲಿನ ಪತ್ರಿಕೆಗಳಲ್ಲಿ ಅಂಕಣಗಾರನಾದ ಒಬ್ಬನು ಬರೆದನು ಮತ್ತು ಆಸ್ಟ್ರೇಲಿಯದ ಒಬ್ಬ ರಾಜಕಾರಣಿ ಸಹ ಹೀಗೆ ಹೇಳಿದನು: ಇಸ್ಲಾಮ್‌ನಲ್ಲಿ ಜಿಹಾದ್ ಮತ್ತು ಆ ರೀತಿಯ ಇತರ ಆಜ್ಞೆಗಳು ಇರುವ ಕಾರಣದಿಂದಲೇ ಮುಸ್ಲಿಮರು ಭೀಕರವಾದಿಗಳಾಗುತ್ತಿದ್ದಾರೆ ಎಂದು. ಇಸ್ಲಾಮೀ ಆಜ್ಞೆಗಳ ಬಗ್ಗೆ ಇಲ್ಲಿನ ಆಡಳಿತ ಪಕ್ಷದ ಓರ್ವ ರಾಜಕಾರಣಿ ಸಹ ಹೀಗೆ ಹೇಳಿದ್ದರು: ಇಸ್ಲಾಮ್‌ನಲ್ಲಿ ಕಠಿಣವಾಗಿ ವರ್ತಿಸುವ ಬಗ್ಗೆ ಆಜ್ಞೆಗಳು ಇವೆ. ಆ ಕಾರಣದಿಂದ ಮುಸ್ಲಿಮರು ಭೀಕರವಾದಿಗಳಾಗುತ್ತಿದ್ದಾರೆ ಎಂದು. ಇನ್ನು ಕೆಲವು ಹೇಳಿಕೆ ನೀಡುವವರು ಮತ್ತು ಬರೆಯುವವರು ಹೀಗೆ ಸಹ ಹೇಳುತ್ತಾರೆ: ಇಸ್ಲಾಮ್‌ನಲ್ಲಿ ಮಾತ್ರವಲ್ಲ ಅನ್ಯ ಧರ್ಮಗಳಲ್ಲೂ ಕಠಿಣ ಆಜ್ಞೆಗಳಿರುವುದು ನಿಜವೆ. ಆದರೆ ಆ ಧರ್ಮಾನುಯಾಯಿಗಳು ಆ ಆಜ್ಞೆಗಳನ್ನು ಪಾಲಿಸುವುದಿಲ್ಲ ಅಥವಾ ಕಾಲಕ್ಕೆ, ಪರಿಸ್ಥಿತಿಗೆ ಅನುಸಾರವಾಗಿ ಅವುಗಳಲ್ಲಿ ಬದಲಾವಣೆಗಳನ್ನು ಮಾಡಿದ್ದಾರೆ. ಆದುದರಿಂದ ಈಗಿನ ಕಾಲಕ್ಕೆ ಅನುಸಾರವಾಗಿ ಪವಿತ್ರ ಖುರ್‌ಆನಿನ ಉಪದೇಶಗಳನ್ನು ಸಹ ಪರಿವರ್ತಿಸಬೇಕಾದ ಆವಶ್ಯಕತೆ ಇದೆ ಎಂದೆಲ್ಲಾ ಹೇಳುತ್ತಾರೆ. ಒಟ್ಟಿನಲ್ಲಿ ಇಂತಹ ಇವರ ಹೇಳಿಕೆಗಳಿಂದೆಲ್ಲಾ ತಿಳಿಯುವುದೇನೆಂದರೆ, ಅನ್ಯ ಧರ್ಮಗಳ ತತ್ವಗಳು ದೇವ ನಿರ್ದೇಶಿತವಾಗಿ ಉಳಿಯಲಿಲ್ಲ. ಮಾನವ ನಿರ್ಮಿತವಾಗಿ ಪರಿವರ್ತನೆಗೊಂಡುವು ಎಂದಾಗಿದೆ. ಅದು ಹಾಗೆಯೇ ಆಗಬೇಕಾಗಿತ್ತು. ಏಕೆಂದರೆ ಆ ಧರ್ಮಗಳ ಉಪದೇಶಗಳ ಬಾಕಿಯಾಗಿ ಉಳಿಯುವ ಬಗ್ಗೆ ಮತ್ತು ಖಿಯಾಮತ್ ತನಕ ಅವುಗಳ ಆಜ್ಞೆಗಳು ಪಾಲಿಸಲ್ಪಡುವುವು ಎಂಬ ಯಾವ ವಾಗ್ದಾನವನ್ನೂ ಅಲ್ಲಾಹನು ನೀಡಿಲ್ಲ. ಆದರೆ ಪವಿತ್ರ ಖುರ್‌ಆನ್ ಬಗ್ಗೆ ಅಲ್ಲಾಹನು ಹೀಗೆ ವಾಗ್ದಾನ ಮಾಡಿದ್ದಾನೆ:

إِنَّا نَحْنُ نَزَّلْنَا الذِّكْرَ وَإِنَّا لَهُ لَحَافِظُونَ

**ಇನ್ನಾ ನಹ್‌ನು ನಝ್ಝಲ್‌ನಝ್ಝಿಕ್‌ರ ವ ಇನ್ನಾಲಹು ಲ ಹಾಫಿಝೂನ್.**

ದಿಟವಾಗಿಯೂ ನಾವೇ ಈ ಉಪದೇಶವನ್ನು ಅವತೀರ್ಣಗೊಳಿಸಿದ್ದು. ಖಂಡಿತವಾಗಿಯೂ ನಾವೇ ಅದನ್ನು ಸಂರಕ್ಷಿಸುವೆವು. (ಪವಿತ್ರ ಖುರ್‌ಆನ್ 15: 10)

ಈ ಸಂರಕ್ಷಣೆಗೆ ಅಲ್ಲಾಹನು ವ್ಯವಸ್ಥೆಯನ್ನೂ ಮಾಡಿದನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ವಿವಿಧ ಸಂದರ್ಭಗಳಲ್ಲಿ ವಿವಿಧ ಗ್ರಂಥಗಳಲ್ಲಿ ಮೇಲೆ ಉಲ್ಲೇಖಿಸಿದ ಪವಿತ್ರ ಖುರ್‌ಆನ್ ವಚನದ ವ್ಯಾಖ್ಯಾನ ಮಾಡಿದ್ದಾರೆ. ಒಂದು ಸ್ಥಳದಲ್ಲಿ ಅವರು ಹೀಗೆ ಹೇಳಿದ್ದಾರೆ: ಪುರಾತನ ಕಾಲದಿಂದ ಸಂಭವಿಸುವುದೇನೆಂದರೆ ಅಲ್ಲಾಹನು ಒಂದು ಜನಾಂಗದೊಂದಿಗೆ ಒಂದು ಕೆಲಸವನ್ನು ಮಾಡಬಾರದು ಎಂದು ಆಜ್ಞಾಪಿಸಿದಾಗ ಆ ಜನಾಂಗದ ಕೆಲವರು ನಿಶ್ಚಯವಾಗಿಯೂ ಆ ನಿಷಿದ್ಧ ಕೆಲಸ ಮಾಡುತ್ತಾರೆ. ಉದಾಹರಣೆಗೆ ಯಹೂದಿಯರೊಂದಿಗೆ ಹೇಳಲಾಗಿತ್ತು ತೌರಾತ್ ಮತ್ತು ಇತರ ದೈವಿಕ ಗ್ರಂಥಗಳನ್ನು ಮಾರ್ಪಡಿಸಬೇಡಿರಿ ಎಂದು. ಆದರೆ ಯಹೂದಿಯರು ತಮ್ಮ ಮತಗ್ರಂಥಗಳಲ್ಲಿ ಬದಲಾವಣೆ ಮಾಡಿದರು. ಆದರೆ ಪವಿತ್ರ ಖುರ್‌ಆನ್ ಬಗ್ಗೆ, ಅದರ ಅನುಯಾಯಿಗಳೊಡನೆ ನೀವು ಇದರಲ್ಲಿ ಬದಲಾವಣೆ ಮಾಡಬೇಕೆಂದು ಆಜ್ಞೆ ನೀಡುವ ಬದಲಾಗಿ ಅಲ್ಲಾಹನು ಹೇಳಿರುವುದೇನೆಂದರೆ, إِنَّا نَحْنُ نَزَّلْنَا الذِّكْرَ وَإِنَّا لَهُ لَحَافِظُونَ **ಇನ್ನಾ ನಹ್‌ನು ನಝ್ಝಲ್‌ನಝ್ಝಿಕ್‌ರ ವ ಇನ್ನಾಲಹು ಲ ಹಾಫಿಝೂನ್** ಎಂದು ಹೇಳಲಾಗಿದೆ. ಈ ವಚನ ಸೂಚಿಸುವುದೇನೆಂದರೆ ಈ ಖುರ್‌ಆನನ್ನು ಲೋಕದಿಂದ ಅಳಿಸಿಬಿಡಲು ಒಂದು ಕೋಮಿನ ಜನರು ಇಚ್ಛಿಸುವರು. ಆಗ ಅಲ್ಲಾಹನು ಓರ್ವ ದಿವ್ಯ ನಿಯೋಜಿತನನ್ನು ಕಳುಹಿಸುವ ಮೂಲಕ ಅದನ್ನು ಸಂರಕ್ಷಿಸುವನು ಎಂದಾಗಿದೆ.

ಪವಿತ್ರ ಖುರ್‌ಆನಿನ ಉಪದೇಶಗಳನ್ನು ಆಕ್ಷೇಪಿಸಿ ಅದನ್ನು ಅಳಿಸಿ ಬಿಡಲು ಈ ಜನರು ಆಗಾಗ ಇಚ್ಛಿಸುತ್ತಾ ಇರುತ್ತಾರೆ. ಏಕೆಂದರೆ ಅವರ ಧರ್ಮದ ಉಪದೇಶಗಳು ಅಳಿದು ಹೋದುವು ಅಥವಾ ಕೇವಲ ಪುಸ್ತಕದೊಳಗೆ ಉಳಿದವು. ಇಂದಿನ ಕಾಲದಲ್ಲಿ ವಿವಿಧ ರೀತಿಗಳಲ್ಲಿ ಸಂದೇಶ ಕಳುಹಿಸಲಾಗುತ್ತಿದೆ. ಟ್ವೀಟ್ ಮೂಲಕ ಸಂದೇಶ ಕಳುಹಿಸುತ್ತಾರೆ. ವಾಟ್ಸ್‌ಆಪ್ ಮೊದಲಾದವುಗಳ ಮೂಲಕ ಸಂದೇಶ ಕಳುಹಿಸುತ್ತಾರೆ. ಇಂತಹ ರೀತಿಯಲ್ಲಿ ಒಂದು ಚಿಕ್ಕ ಫಿಲ್ಮ್ ಚಲಾಯಿಸಲಾಗಿತ್ತು. ಇಬ್ಬರು ಹುಡುಗರು "ಖರ್‌ಆನ್" ಎಂದು ಬರೆದ ಒಂದು ಪುಸ್ತಕದಿಂದ ಅದರ ವಚನಗಳೆಂದು ಕೆಲವು ವಾಕ್ಯಗಳನ್ನು ಓದಿ ಹೇಳುತ್ತಿದ್ದರು. ಅವು ಖುರ್‌ಆನಿನ ವಾಕ್ಯಗಳೆಂದು ಭಾವಿಸಿ ಜನರು ಆ ವಾಕ್ಯಗಳಲ್ಲಿ ಅಡಕವಾದ ಉಪದೇಶಗಳನ್ನು ಆಕ್ಷೇಪಿಸಲು ತೊಡಗಿದರು. ಸ್ವಲ್ಪ ಸಮಯದ ನಂತರ ಆ ಹುಡುಗರು ಆ ಪುಸ್ತಕದ ಹೊರಕವಚವನ್ನು ಕಳಚಿದರು. ಮತ್ತು ಹೇಳಿದರು– ನಾವು ಓದಿದುದು ಖುರ್‌ಆನಿನ ಉಪದೇಶಗಳನ್ನಲ್ಲ ಬದಲಾಗಿ ಬೈಬಲಿನ ಉಪದೇಶಗಳನ್ನಾಗಿದೆ ಎಂದು. ಆಗ ಯಾರೂ ಆ ಉಪದೇಶಗಳ ವಿರುದ್ಧ ಏನೂ ಹೇಳಲಿಲ್ಲ. ಎಲ್ಲರೂ ನಕ್ಕು ಸುಮ್ಮಗಾದರು. ಆದರೆ ಇವರು ಇಸ್ಲಾಮಿನ ಹೆಸರು ಕೇಳಿದ ಕೂಡಲೆ ಆಕ್ಷೇಪಿಸಲು ತೊಡಗಿದ್ದರು. ಇದು ಈ ಜನರ ಸ್ಥಿತಿಯಾಗಿದೆ.

ಒಬ್ಬ ಮುಸ್ಲಿಮ್ ತಪ್ಪು ಕೆಲಸ ಮಾಡಿದರೆ ಇಸ್ಲಾಮ್ ವಿರುದ್ಧ ಆರೋಪ ಮಾಡುತ್ತಾರೆ. ಆದರೆ ಅನ್ಯ ಧರ್ಮದವ ತಪ್ಪು ಕೆಲಸ ಮಾಡಿದರೆ ಹೇಳುತ್ತಾರೆ: ಅವನು ಕ್ಷಮಾರ್ಹನು, ಅವನು ಹುಚ್ಚನು ಎಂದು. ಕೆಲವು ಮುಸ್ಲಿಮ್ ಗುಂಪುಗಳು ಇಸ್ಲಾಮಿನ ಹೆಸರಲ್ಲಿ ತಪ್ಪು ಕೆಲಸ ಮಾಡುತ್ತಾ ಇಸ್ಲಾಮನ್ನು ಅಪಕೀರ್ತಿಗೆ ಗುರಿಪಡಿಸುತ್ತಾರೆ ಎಂದು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಆ ಕಾರಣದಿಂದ ಪವಿತ್ರ ಖುರ್‌ಆನನ್ನು, ಇಸ್ಲಾಮ್ ಧರ್ಮವನ್ನು ಆಕ್ರಮಣ ಮಾಡಬಾರದು. ಇಸ್ಲಾಮಿನ ವಿರುದ್ಧ ದ್ವೇಷವನ್ನು ಪ್ರಕಟಿಸುವುದು ಸರಿಯಲ್ಲ. ಇದರ ಅತ್ಯಂತ ದ್ವೇಷಭರಿತ ಒಂದು ಉದಾಹರಣೆ ಅಮೇರಿಕದ ಪ್ರಸಿಡೆಂಟ್ ಅಭ್ಯರ್ಥಿಯಾದವನು ಇಸ್ಲಾಮ್ ಮತ್ತು ಮುಸ್ಲಿಮರ ವಿರುದ್ಧ ಇತ್ತೀಚೆಗೆ ನೀಡಿದ ಹೇಳಿಕೆಯಾಗಿದೆ.

ಇಸ್ಲಾಮ್ ವಿರುದ್ಧ ಈ ಜನರು ತಮ್ಮ ಇಚ್ಛೆ ಪ್ರಕಾರ ಹೇಳಿಕೊಳ್ಳಲಿ. ಆದರೆ ಇಸ್ಲಾಮ್ ಧರ್ಮದ ಸುಂದರ ತತ್ವಗಳನ್ನು ಯಾವುದೇ ಧರ್ಮ ಎದುರಿಸಲಾರದು ಮತ್ತು ಅವರು ಸ್ವಯಂ ರಚಿಸಿದ ನಿಯಮಗಳು ಸಹ ಹಾಗೆ ಮಾಡಲಾರವು. ಅವರು ಹೇಳುತ್ತಾರೆ: ನಾವು ಪರಿಸ್ಥಿತಿಗೆ ಅನುಸಾರವಾಗಿ ನಿಯಮಗಳನ್ನು ಬದಲಾಯಿಸಿದೆವು ಎಂದು. ಅಲ್ಲಾಹನು ಈ ಕಾಲಘಟ್ಟದಲ್ಲಿ ಪವಿತ್ರ ಖುರ್‌ಆನಿನ ಸಂರಕ್ಷಣೆಗೆ ತನ್ನ ವಾಗ್ದಾನ ಪ್ರಕಾರ ಒಬ್ಬ ಸಂದೇಶವಾಹಕನನ್ನು ಕಳುಹಿಸಿದನು. ಅವರು ಇಸ್ಲಾಮಿನ ಸುಂದರ ಉಪದೇಶಗಳನ್ನು ನಮಗೆ ವಿವರಿಸಿಕೊಟ್ಟರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೀಗೆ ಹೇಳುತ್ತಾರೆ: "ಪವಿತ್ರ ಖುರ್‌ಆನಿನ ಇನ್ನೊಂದು ಹೆಸರು **ಝಿಕ್ರ್** 'ಸ್ಮರಣೆ' ಎಂದಾಗಿದೆ. ಮನುಷ್ಯನಲ್ಲಿ ಅಡಗಿರುವ ಮತ್ತು ಅವನು ಮರೆತುಬಿಟ್ಟ ಸತ್ಯಗಳನ್ನು ಹಾಗೂ

ಅಮಾನತುಗಳನ್ನು ನೆನಪಿಸಲು ಇದು ಆಗಮಿಸಿದೆ ಎಂದರ್ಥ. ಅಲ್ಲಾಹನ ವಾಗ್ದಾನ **ಇನ್ನಾಲಹೂ ಲ ಹಾಫಿಝೂನ್** (ಖಂಡಿತವಾಗಿಯೂ ನಾವೇ ಅದನ್ನು ಸಂರಕ್ಷಿಸುವೆವು) ಎಂಬ ಪ್ರಕಾರ ಈ ಕಾಲದಲ್ಲೂ ಆಕಾಶದಿಂದ ಒಬ್ಬ ಶಿಕ್ಷಕನು ಆಗಮಿಸಿದನು. ಅವನು ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಮಾಡಿದ وَآخَرِينَ مِنْهُمْ لَمَّا يَلْحَقُوا بِهِمْ **ವ ಆಖರೀನ ಮಿನ್‌ಹುಮ್ ಲಮ್ಮಾ ಯಲ್‌ಹಖೂಬಿಹಿಮ್** ಅವರೊಂದಿಗೆ ಇಷ್ಟರವರೆಗೆ ಸೇರಿಲ್ಲದ ಅವರ ಪೈಕಿಯ ಇನ್ನೊಂದು ಜನತೆಯಲ್ಲೂ (62: 4). ಎಂಬುದನ್ನು ಸತ್ಯಪಡಿಸುವ ವಾಗ್ದತ್ತ ಮಹಾನುಭಾವನಾಗಿದ್ದಾನೆ. ನಿಮ್ಮ ಎದುರಿಗೆ ಮಾತನಾಡುವ ನಾನೇ ಆ ಕಳುಹಿಸಲ್ಪಟ್ಟವನಾಗಿದ್ದೇನೆ. ಈ ಜಮಾಅತಿನ ಬಗ್ಗೆ ಶ್ರದ್ಧೆ ವಹಿಸುವವರು ಅನುಗ್ರಹ ಗಳಿಸಿದವರು'' ಎಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿಗೆ ಸೇರುವವರು ಅನುಗ್ರಹ ಗಳಿಸುವರು ಎಂದರ್ಥ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೀಗೆ ಹೇಳಿದರು: ಅಲ್ಲಾಹನು ತನ್ನ ವಾಗ್ದಾನ ಪ್ರಕಾರ ಪವಿತ್ರ ಖುರ್‌ಆನಿನ ಭವ್ಯತೆಯನ್ನು ಸ್ಥಾಪಿಸಲು ಹಿಜರಿ ಹದಿನಾಲ್ಕನೆಯ ಶತಮಾನದ ಆರಂಭದಲ್ಲಿ ನನ್ನನ್ನು ಕಳುಹಿಸಿದನು. ಪವಿತ್ರ ಖುರ್‌ಆನಿನ ಬೆಂಬಲ ಮತ್ತು ಸಹಾಯ ನಮ್ಮ ಜೊತೆಗಿದೆ.

ಈಗ ಯಾವುದೇ ಬೇರೆ ಧರ್ಮದ ಅನುಯಾಯಿಗಳಿಗೆ ಈ ಅನುಗ್ರಹ ಲಭಿಸುವುದಿಲ್ಲ. ಖಡ್ಗದ ಮೂಲಕ ಇಸ್ಲಾಮನ್ನು ಹರಡುವ ವಾದ ಮಾಡುವವರು ವಾಸ್ತವಿಕವಾಗಿ ಇಸ್ಲಾಮ್ ವಿರುದ್ಧ ಶಕ್ತಿಗಳ ಉಪಕರಣವಾಗಿದ್ದಾರೆ. ಈ ಕಾಲಘಟ್ಟ ಖಡ್ಗ ಬಳಸಿ ಜಿಹಾದ್ ಮಾಡುವ ಕಾಲಘಟ್ಟ ಅಲ್ಲ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಮಗೆ ಸ್ಪಷ್ಟವಾಗಿ ಹೇಳಿದ್ದಾರೆ. ಖಡ್ಗ ಬಳಸಿ ಜಿಹಾದ್ ಮಾಡುವ ಅನುಮತಿ ನೀಡಿದುದು ಆಗಿನ ಕಾಲದ ಪರಿಸ್ಥಿತಿಗೆ ಅನುಸಾರವಾಗಿ ಶರತ್ತು ಬದ್ಧವಾಗಿ ನೀಡಲಾಗಿತ್ತು. ಆಗ ಇಸ್ಲಾಮಿನ ಆರಂಭಕಾಲದಲ್ಲಿ ಶತ್ರುಗಳು ಇಸ್ಲಾಮನ್ನು ಖಡ್ಗ ಬಳಸಿ ನಾಶಮಾಡಲು ಇಚ್ಛಿಸುತ್ತಿದ್ದರು. ಈಗ ಆ ಪರಿಸ್ಥಿತಿ ಇರುವುದಿಲ್ಲ. ಆದುದರಿಂದ ಖಡ್ಗ ಬಳಸಿ ಜಿಹಾದ್ ಮಾಡುವ ಆವಶ್ಯಕತೆಯೂ ಈಗ ಇರುವುದಿಲ್ಲ. ಇಸ್ಲಾಮ್ ಶಾಂತಿ ಮತ್ತು ಪ್ರೇಮದ ಉಪದೇಶಗಳಿಂದ ತುಂಬಿದೆ. ಮುಸ್ಲಿಮರು ಪಂಗಡಗಳಾಗಿ ಪರಸ್ಪರ ಕೊಂದು ಮತ್ತು ಸುಟ್ಟು ಹಾಕಿ ಇಸ್ಲಾಮಿನ ಹೆಸರನ್ನು ಅಪಕೀರ್ತಿಪಡಿಸುತ್ತಿದ್ದಾರೆಂದು ಮುಸ್ಲಿಮರಿಗೂ ನಾವು ಹೇಳಬಯಸುತ್ತೇವೆ. ನಮ್ಮ ಬಳಿ ಹೆಚ್ಚು ಸಾಧನ ಸಂಪತ್ತುಗಳಿಲ್ಲವಾದರೂ ನಮಗೆ ಸಾಧ್ಯವಿರುವಷ್ಟು ಮಟ್ಟಿಗೆ ಪತ್ರಿಕೆಗಳ ಮೂಲಕ ಮತ್ತು ದೃಶ್ಯಮಾಧ್ಯಮಗಳ ಮೂಲಕ ಈ ಕೆಲಸವನ್ನು ಪ್ರತಿಯೊಂದು ದೇಶದಲ್ಲಿ ಪ್ರತಿಯೊಂದು ನಗರದಲ್ಲಿ ನಾವು ಮಾಡಬೇಕು. ಈ ಕಾಲದಲ್ಲಿ ಇಸ್ಲಾಮ್ ಧರ್ಮದ ವಾಸ್ತವಿಕ ಚಿತ್ರ ತೋರಿಸಿಕೊಡುವುದು ಆವಶ್ಯಕವಾಗಿದೆ.

ಕೆಲವು ದಿನಗಳ ಹಿಂದೆ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಗ್ಲಾಸ್‌ಗೋ ನಗರದ ಒಬ್ಬ ಪಾರ್ಲಿಮೆಂಟ್ ಸದಸ್ಯರು ಇಸ್ಲಾಮ್ ಧರ್ಮದ ವಾಸ್ತವಿಕ ರೂಪದ ಬಗ್ಗೆ ಅಹ್ಮದಿಯಾ ಜಮಾಅತನ್ನು ಪ್ರಸ್ತಾಪಿಸಿ ಇಸ್ಲಾಮಿನ ಶಾಂತಿ ಮತ್ತು ಸುರಕ್ಷೆಯ ಉಪದೇಶಗಳನ್ನು ಅನುಷ್ಠಿಸುವವರು ಅಹ್ಮದಿ ಮುಸ್ಲಿಮರಾಗಿದ್ದಾರೆ ಎಂದು ಹೇಳಿದರು. ಗ್ಲಾಸ್‌ಗೋದಲ್ಲಿ ಜರಗಿಸಲಾದ ಒಂದು ಪೀಸ್ ಸಿಂಪೋಸಿಯಂಗೆ ನಾನು ಹೋಗಿದ್ದೆ ಎಂದು ಹೇಳಿ ಅದರ ಬಗ್ಗೆ ಹೊಗಳಿ ಹೇಳಿದರು. ಆಗ ಅಲ್ಲಿ ಕುಳಿತಿದ್ದ ಗೃಹಮಂತ್ರಾಲಯದ ಕಾರ್ಯದರ್ಶಿ (ಹೋಮ್ ಸೆಕ್ರೆಟರಿ) ಹೇಳಿದರು– ಅಹ್ಮದಿಯರು ಪ್ರತಿಪಾದಿಸುವ ಇಸ್ಲಾಮ್, ಇಸ್ಲಾಮೀ ಭೀಕರವಾದಿಗಳು ಪ್ರದರ್ಶಿಸುವ ಇಸ್ಲಾಮಿಗಿಂತ ಸಂಪೂರ್ಣ ಭಿನ್ನವಾಗಿದೆ. ಅಹ್ಮದಿಯರು ಶಾಂತಿಪ್ರಿಯರಾದ ನಾಗರಿಕರಾಗಿದ್ದಾರೆ ಎಂದು ಹೇಳಿದರು. ವಾಸ್ತವದಲ್ಲಿ ಅಹ್ಮದಿಯರು ಯಾವುದಾದರೂ ಹೊಸ ತತ್ವವನ್ನು ಪ್ರತಿಪಾದಿಸುವುದಿಲ್ಲ. ಅವರು ಪವಿತ್ರ ಖುರ್‌ಆನಿನ ತತ್ವಗಳನ್ನೇ ಪ್ರತಿಪಾದಿಸುತ್ತಿದ್ದಾರೆ.

ನಾನು ಜಪಾನಿಗೆ ಇತ್ತೀಚೆಗೆ ಹೋದಾಗ ಅಲ್ಲಿನ ವಿದ್ಯಾಸಂಪನ್ನರಾದ ಜನರು ಇದೇ ಮಾತನ್ನು ಹೇಳಿದ್ದರು. ಮಾತ್ರವಲ್ಲ ಒಬ್ಬ ಕ್ರೈಸ್ತ ಪಾದರಿ ಹೇಳಿದರು: ನೀವು ಪವಿತ್ರ ಖುರ್‌ಆನಿನ ಬೆಳಕಿನಲ್ಲಿ ಪ್ರಕಟಿಸುವ ಇಸ್ಲಾಮ್ ಧರ್ಮದ ಉಪದೇಶಗಳನ್ನು ಅರಿತು ಕೊಳ್ಳುವುದು ಜಪಾನಿಯರಿಗೆ ಬಹಳ ಆವಶ್ಯಕವಾಗಿದೆ. ಮಾತ್ರವಲ್ಲ ಇಡೀ ಲೋಕಕ್ಕೆ ಅದರ ಆವಶ್ಯಕತೆಯಿದೆ ಎಂದು ಹೇಳಿದರು. ಜಪಾನಿನ ಜಮಾಅತಿನ ಜನರು ಸಮಗ್ರವಾಗಿ ಯೋಜನೆ ತಯಾರಿಸಿ ಈ ಅಭಿಪ್ರಾಯಗಳನ್ನು ತಾಜಾ ಆಗಿ ಇರುವಂತೆ ಮಾಡುವವರಾಗಬೇಕು. ಅದೇ ರೀತಿ ಯು.ಕೆ.ಯಲ್ಲೂ ಲೋಕದ ಇತರ ದೇಶಗಳಲ್ಲೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಮಗೆ ಕಲಿಸಿಕೊಟ್ಟ ಇಸ್ಲಾಮಿಗೆ ಸಂಬಂಧಿಸಿದ ಜ್ಞಾನವನ್ನು ಹರಡಬೇಕು.

ಈ ಕಾಲಘಟ್ಟದಲ್ಲಿ ಪವಿತ್ರ ಖುರ್‌ಆನನ್ನು ಸಂರಕ್ಷಿಸುವ ಕೆಲಸವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೂಲಕ ಅಲ್ಲಾಹನು ಮಾಡಿದ್ದಾನೆ. ಇದೇ ಕೆಲಸ ಪ್ರತಿಯೊಬ್ಬ ಅಹ್ಮದಿ ಮಾಡಬೇಕಾಗಿದೆ. ಪ್ರತಿಯೊಂದು ವರ್ಗದ ಮತ್ತು ಪ್ರತಿಯೊಂದು ಮನೋಭಾವದ ಜನರಿಗೆ ಈ ಸಂದೇಶವನ್ನು ತಲಪಿಸಬೇಕು. ಪ್ರತಿಯೊಂದು ಸ್ಥಳದಲ್ಲಿ ಈ ಕೆಲಸ ಮಾಡುತ್ತಾ ನೀವು ಬೈಅತ್ ಮಾಡಿದ ನಿಮ್ಮ ಹೊಣೆಗಾರಿಕೆಗಳನ್ನು ಈಡೇರಿಸಬೇಕಾಗಿದೆ.

ಇಸ್ಲಾಮಿನ ಶಾಂತಿ ಸಂದೇಶದ ಸೌಹಾರ್ದವನ್ನು ಪ್ರಕಟಿಸುವ ಕೆಲವು ಉದಾಹರಣೆಗಳನ್ನು ನೀಡುತ್ತೇನೆ. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ: لاَ إِكْرَاهَ فِي الدِّينِ **ಲಾ ಇಕ್ರಾಹ ಫಿದ್ದೀನ್**. ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ. (2:257).

ಇನ್ನೊಂದು ವಚನ ಹೀಗಿದೆ: وَلَوْ شَاءَ رَبُّكَ لَآمَنَ مَنْ فِي الْأَرْضِ كُلُّهُمْ جَمِيعًا أَفَأَنْتَ تُكْرِهُ النَّاسَ حَتَّى يَكُونُوا مُؤْمِنِينَ **ವ ಲೌ ಶಾಅ ರಬ್ಬುಕ ಲಆಮನ ಮನ್‌ಫಿಲ್ ಅರ್‌ಝಿ ಕುಲ್ಲುಹುಮ್ ಜಮೀಅ. ಅಫಅಂತ ತುಕ್‌ರಿಹುನ್ನಾಸ ಹತ್ತಾ ಯಕೂನೂ ಮೂಮಿನೀನ್.**

ನಿನ್ನ ಪ್ರಭು ಇಚ್ಛಿಸಿದ್ದರೆ, ಭೂಲೋಕದಲ್ಲಿರುವ ಎಲ್ಲರೂ ವಿಶ್ವಾಸ ಹೊಂದುತ್ತಿದ್ದರು. (ಆದರೆ ಅವನು ನಿರ್ಬಂಧಪಡಿಸುವುದಿಲ್ಲ) ಹಾಗಿರುವಾಗ ಜನರು ವಿಶ್ವಾಸಿಗಳಾಗುವಂತೆ ನೀನು ಬಲವಂತಪಡಿಸುವಿಯೋ? (10:100). ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೀಗೆ ಹೇಳಿದ್ದಾರೆ: ಇಸ್ಲಾಮ್ ಧರ್ಮ ಎಂದೂ ಬಲಾತ್ಕಾರ ಮಾಡಲು ಉಪದೇಶ ನೀಡಿಲ್ಲ. ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳಿದನು: ಅಲ್ಲಾಹನು ಇಚ್ಛಿಸುತ್ತಿದ್ದರೆ ಭೂಮಿಯಲ್ಲಿ ಇರುವ ಎಲ್ಲರೂ ವಿಶ್ವಾಸಿಗಳಾಗುತ್ತಿದ್ದರು. ಆದರೆ ಅಲ್ಲಾಹನು ಹಾಗೆ ಇಚ್ಛಿಸಲಿಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಾಗೆ ಇಚ್ಛಿಸಿದ್ದರೂ ಕೂಡ ಹಾಗೆ ಆಗಲಾರದು ಎಂದು ಅಲ್ಲಾಹನು ಹೇಳಿರುವನು. ಆದುದರಿಂದ ಇಸ್ಲಾಮ್‌ನಲ್ಲಿ ಬಲಾತ್ಕಾರ ಇಲ್ಲ ಎಂಬುದನ್ನು ನಾವು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದರು: ''ಇಸ್ಲಾಮ್ ಅನುಮತಿಸುವ ಯುದ್ಧಗಳು ಮೂರು ರೀತಿಯವುಗಳಾಗಿವೆ. ಒಂದನೆಯದು, ಬಲಾತ್ಕಾರ ನಡೆದಾಗ ಬಲಾತ್ಕಾರವನ್ನು ತಡೆಯಲು ಕಠಿಣವಾಗಿ ವರ್ತಿಸಲು ಅನುಮತಿ ಇದೆ. ಎರಡನೆಯದು, ಸ್ವಂತ ರಕ್ಷಣೆಗೋಸ್ಕರ ಪ್ರತಿರೋಧಿಸಲು. ಅಂದರೆ ತಮ್ಮ ಮೇಲೆ ಆಕ್ರಮಣ ನಡೆದರೆ ಆಗ ಆಕ್ರಮಣ ಮಾಡಬಹುದು. ಶಿಕ್ಷೆ ನೀಡುವ ಸಲುವಾಗಿ ಕೊಲೆಗೆ ಪ್ರತಿಯಾಗಿ ಕೊಲ್ಲುವುದು. ಯಾರಾದರೂ ಆಕ್ರಮಣ ಮಾಡಿದ್ದರೆ ರಕ್ತಪಾತ ನಡೆಸಿದ್ದರೆ ಶಿಕ್ಷೆಯ ರೂಪದಲ್ಲಿ

ಆಕ್ರಮಣ ಮಾಡಬಹುದು. ಮೂರನೆಯದು, ಸ್ವಾತಂತ್ರ್ಯವನ್ನು ಕಾಪಾಡಲು. ಶತ್ರುಗಳ ಶಕ್ತಿಯನ್ನು ಮುರಿಯಲು. ಯಾಕೆಂದರೆ ಮುಸ್ಲಿಮರಾದ ಕಾರಣದಿಂದ ಅವರು ಜನರನ್ನು ಕೊಲ್ಲುತ್ತಿದ್ದರು. ಅದನ್ನು ತಡೆಯಲಿಕ್ಕಾಗಿ ಬಲಪ್ರಯೋಗ ನಡೆಸಬಹುದಾಗಿದೆ.

ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಹೇಳಿದೆ– ಧರ್ಮ ಪ್ರಚಾರ ಮಾಡಲು ಖಡ್ಗವೆತ್ತಬಾರದೆಂದು. ಧರ್ಮದ ಸೌಂದರ್ಯವನ್ನು ಪ್ರಕಟಿಸಲು ಉಪದೇಶಿಸಿದೆ. ಇಸ್ಲಾಮ್ ಧರ್ಮದ ಆರಂಭದಲ್ಲಿ ಖಡ್ಗವೆತ್ತಲು ಆದೇಶಿಸಲಾಗಿದೆಯಲ್ಲ ಎಂದು ಯೋಚಿಸಬೇಡಿರಿ. ಆಗ ಖಡ್ಗ ಎತ್ತಿದುದು ಧರ್ಮವನ್ನು ಪ್ರಚಾರ ಮಾಡಲಿಕ್ಕಾಗಿರಲಿಲ್ಲ. ಶತ್ರುಗಳ ಆಕ್ರಮಣದಿಂದ ರಕ್ಷಿಸಿಕೊಳ್ಳಲು ಮತ್ತು ಶಾಂತಿಯನ್ನು ಕಾಪಾಡಲಿಕ್ಕಾಗಿ ಖಡ್ಗ ಎತ್ತಲು ಅನುಮತಿ ನೀಡಲಾಗಿತ್ತು. ಧರ್ಮಕ್ಕೋಸ್ಕರ ಬಲಾತ್ಕಾರ ಮಾಡಲು ಎಂದೂ ಉದ್ದೇಶಿಸಿರಲಿಲ್ಲ.

ಕೆಲವರು ಮುಸ್ಲಿಮರೆಂದು ಹೇಳಿಕೊಂಡು ಇಸ್ಲಾಮನ್ನು ಖಡ್ಗ ಬಲದಿಂದ ಪ್ರಚಾರ ಮಾಡಬೇಕೆಂದು ತಿಳಿದುಕೊಂಡಿದ್ದಾರೆ. ಅವರಿಗೆ ಇಸ್ಲಾಮಿನ ಸೌಂದರ್ಯಗಳ ಬಗ್ಗೆ ಜ್ಞಾನವಿಲ್ಲ. ಧರ್ಮದ ಸೌಂದರ್ಯ ಜನರ ಮುಂದಿರಿಸಿರಿ. ಆದರೆ ಹಾಗೆ ಮಾಡಲು ಅದರ ಬಗ್ಗೆ ಜ್ಞಾನವಿರಬೇಕು. ನೀವು ನಿಮ್ಮ ಜ್ಞಾನವನ್ನು ವರ್ಧಿಸಿರಿ. ನಿಮ್ಮ ಉತ್ತಮ ಮಾದರಿಯಿಂದ ಜನರನ್ನು ಆಕರ್ಷಿಸಿರಿ. ನೀವು ನಿಮ್ಮ ಒಳ್ಳೆಯ ಮಾದರಿ ಸ್ಥಾಪಿಸಿರಿ. ಆ ಮೂಲಕ ಜನರು ನಮ್ಮ ಕಡೆಗೆ ಬರುವಂತಾಗಲಿ.

ಆದುದರಿಂದ ಪ್ರತಿಯೊಬ್ಬ ಅಹ್ಮದಿಯ ಮೇಲೆ ಬಹಳ ದೊಡ್ಡ ಹೊಣೆಗಾರಿಕೆ ಇದೆ. ಧರ್ಮದ ಸೌಂದರ್ಯವನ್ನು ಪ್ರಕಟಿಸಲು ಪವಿತ್ರ ಖುರ್‌ಆನಿನ ಯಥಾರ್ಥ ಜ್ಞಾನವನ್ನು ಗಳಿಸಬೇಕು. ಅನಂತರ ತಮ್ಮ ಉತ್ತಮ ಮಾದರಿ ಸ್ಥಾಪಿಸಿ ಲೋಕವನ್ನು ತಮ್ಮ ಕಡೆಗೆ ಆಕರ್ಷಿಸಬೇಕು. ನೀವು ಇದೇ ಜ್ಞಾನ ಗಳಿಸಿ ಜ್ಞಾನವನ್ನು ಕೃತಿರೂಪಕ್ಕೆ ತಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗುಲಾಮರಾಗಿ ಪವಿತ್ರ ಖುರ್‌ಆನ್ ಮತ್ತು ಇಸ್ಲಾಮಿನ ಸಂರಕ್ಷಣೆಯ ಕಾರ್ಯದಲ್ಲಿ ಪಾಲುಗಾರರಾಗಬಹುದು. ಲೋಕದಲ್ಲಿ ವಾಸ್ತವಿಕ ಶಾಂತಿ ಸ್ಥಾಪಿತವಾಗಬೇಕಾದರೆ ಪವಿತ್ರ ಖುರ್‌ಆನ್ ಮೂಲಕವೇ ಅದು ಸಾಧ್ಯವಾಗುವುದು ಎಂದು ನಾವು ಲೋಕಕ್ಕೆ ತೋರಿಸಿಕೊಡಬಲ್ಲೆವು.

ಪವಿತ್ರ ಖುರ್‌ಆನ್ ಒಂದು ಸ್ಥಳದಲ್ಲಿ ಇಸ್ಲಾಮ್ ಧರ್ಮ ಸ್ವೀಕರಿಸದವರನ್ನು ಹೀಗೆ ಚಿತ್ರೀಕರಿಸಿದೆ. وَقَالُوا إِنْ نَتَّبِعِ الْهُدَى مَعَكَ نُتَخَطَّفْ مِنْ أَرْضِنَا **ವ ಖಾಲೂ ಇನ್ ನತ್ತಬಿಇಲ್ ಹುದಾ ಮಅಕ ನುತಖತ್ತಫ್ ಮಿನ್ ಅರ್‌ಝಿನಾ.** ಅವರು ಹೇಳುತ್ತಾರೆ: ನಿನ್ನೊಂದಿಗೆ (ನೀನು ನಿರ್ದೇಶಿಸುವ) ಮಾರ್ಗದರ್ಶನವನ್ನು ನಾವು ಸ್ವೀಕರಿಸಿದರೆ, ನಾವು ನಮ್ಮ ಊರಿನಿಂದ ಕಿತ್ತೆಸೆಯಲ್ಪಡುವೆವು. (28: 58)

ನೋಡಿರಿ, ಇಸ್ಲಾಮ್ ಬಲಾತ್ಕಾರವನ್ನು ಉಪದೇಶಿಸುತ್ತಿದೆ ಎಂದು ಅದರ ವಿರುದ್ಧ ಆಕ್ಷೇಪವಿರಲಿಲ್ಲ. ಇಸ್ಲಾಮನ್ನು ಸ್ವೀಕರಿಸದ ಜನರು ಅದರ ವಿರುದ್ಧ ಮಾಡಿದ ಆಕ್ಷೇಪವೇನೆಂದರೆ, ಓ ಪ್ರವಾದಿ, ನಾವು ನಿನ್ನ ಉಪದೇಶಗಳ ಪ್ರಕಾರ ವರ್ತಿಸಿದರೆ ಅದು ಶಾಂತಿ ಪ್ರತಿಪಾದಕ ಉಪದೇಶವಾದ ಕಾರಣ ಸುತ್ತು ಮುತ್ತಲಿನ ಜನಾಂಗಗಳು ನಮ್ಮನ್ನು ನಾಶಮಾಡುವರು ಎಂದಾಗಿತ್ತು.

ಇಸ್ಲಾಮಿನ ಉಪದೇಶ ಸ್ನೇಹದ ಕೈ ಚಾಚುವುದಾಗಿದೆ. ಶಾಂತಿಯನ್ನು ಸ್ಥಾಪಿಸುವ ಉಪದೇಶವಾಗಿದೆ. ಶಾಂತಿ ಮತ್ತು ಪ್ರೀತಿಯ ಸಂದೇಶ ನೀಡುವ ಉಪದೇಶವಾಗಿದೆ. ಕೆಲವು ಮುಸ್ಲಿಮ್ ಗುಂಪುಗಳು ಈ ಉಪದೇಶಗಳ ಪ್ರಕಾರ ನಡೆಯುವುದಿಲ್ಲವಾದರೆ ಅದು ಅವರ ದುರದೃಷ್ಟವಾಗಿದೆ. ಈ ಜನರು ತಮ್ಮ ಸ್ವಾರ್ಥಲಾಭಕ್ಕೋಸ್ಕರ ತಮ್ಮ ಭೌಗೋಳಿಕ ಮತ್ತು ರಾಜಕೀಯ ಹಿರಿಮೆಯನ್ನು ಗಳಿಸಲು ಹಿಂಸಾಚಾರ ಮಾಡುತ್ತಿದ್ದಾರೆ. ಮುಸ್ಲಿಮ್ ದೇಶಗಳಲ್ಲಿ ಘಟಿಸುವ ಹಿಂಸಾಚಾರಗಳಲ್ಲಿ ಕೆಲವು ದೊಡ್ಡ ದೇಶಗಳ ಕೈವಾಡವಿದೆ. ಈಗ ವಿವಿಧ ಪಾಶ್ಚಿಮಾತ್ಯ ಮಾಧ್ಯಮಗಳಲ್ಲಿ ಅವರ ಸ್ವಂತ ಜನರೇ ಹೇಳುತ್ತಿದ್ದಾರೆ: ಮುಸ್ಲಿಮ್ ಭೀಕರವಾದಿ ಗುಂಪುಗಳು ನಮ್ಮ ಸರಕಾರಗಳೇ ಸೃಷ್ಟಿಸಿದವುಗಳಾಗಿವೆ ಎಂದು. ಇರಾಕ್ ಯುದ್ಧ ಮತ್ತು ಸಿರಿಯಾದ ಸ್ಥಿತಿ ಬಿಗಡಾಯಿಸಿದ ನಂತರ ಇವುಗಳನ್ನು ಸೃಷ್ಟಿಸಲಾಗಿದೆ ಎಂದು ಈಗ ಹೇಳುತ್ತಿದ್ದಾರೆ.

ಆದರೆ ಈ ಮಾತುಗಳು ಇಸ್ಲಾಮಿನ ಹೆಸರಲ್ಲಿ ಭೀಕರ ಕೃತ್ಯಗಳನ್ನು ನಡೆಸುವವರನ್ನು ಅವರ ಹೊಣೆಗಾರಿಕೆಗಳಿಂದ ಮುಕ್ತರನ್ನಾಗಿ ಮಾಡಲಾರವು. ಆದರೆ ಈ ಅಗ್ನಿಯನ್ನು ಪ್ರಜ್ವಲಿಸುವುದರಲ್ಲಿ ಮಹಾಶಕ್ತಿಗಳ ಹಸ್ತಕ್ಷೇಪ ಖಂಡಿತವಾಗಿಯೂ ಇದೆ. ಈಗ ಒಂದು ಕಡೆ ಭೀಕರ ಕೃತ್ಯ ನಡೆಸುವವರನ್ನು ನಾಶ ಮಾಡುವ ಮಾತು ಆಡುತ್ತಿದ್ದಾರೆ. ಅವರ ಮೇಲೆ ಬಾಂಬ್ ದಾಳಿ ನಡೆಸಲಾಗುತ್ತಿದೆ. ಇನ್ನೊಂದು ಕಡೆ ಅವರಿಗೆ ಆಯುಧ ಸರಬರಾಜು ಮಾಡುವವರನ್ನು ಅವರಿಗೆ ತಪ್ಪು ವಿಧಾನದಲ್ಲಿ ಹಣ ಕಳುಹಿಸುವವರನ್ನು ಅಥವಾ ಅವರೊಂದಿಗೆ ಆರ್ಥಿಕ ವ್ಯವಹಾರ ಮಾಡುವವರನ್ನು ಅವರೆಲ್ಲ ಯಾರು ಎಂದು ತಿಳಿದಿದ್ದರೂ ಅವರ ಕಡೆಗೆ ಕಣ್ಣು ಮುಚ್ಚಿಬಿಟ್ಟಿದ್ದಾರೆ.

ಲೋಕದ ಶಾಂತಿಗೆ ಭಂಗ ಉಂಟುಮಾಡುವವರು ಇಸ್ಲಾಮಿನ ಉಪದೇಶಗಳಿಗೆ ವಿರುದ್ಧವಾಗಿ ವರ್ತಿಸಿ ಹಿಂಸಾಚಾರ ನಡೆಸುವ ಮುಸ್ಲಿಮ್ ಉಗ್ರವಾದಿ ಗುಂಪುಗಳು ಮಾತ್ರವಲ್ಲ ಮಹಾಶಕ್ತಿ ದೇಶಗಳು ಸಹ ಅವರೊಂದಿಗೆ ಸೇರಿವೆ. ಅವರಿಗೆ ತಮ್ಮ ಸ್ವಾರ್ಥ ಹಿತಾಸಕ್ತಿಗಳು ಪ್ರಥಮ ಸ್ಥಾನದಲ್ಲಿದೆ. ಲೋಕದಲ್ಲಿ ಶಾಂತಿ ಸ್ಥಾಪಿತವಾಗುವುದು ಅವರಿಗೆ ದ್ವಿತೀಯ ಸ್ಥಾನದ್ದಾಗಿದೆ.

ಅಲ್ಲಾಹನು ಸಲಾಮ್ (ಶಾಂತಿದಾಯಕ) ಎಂದು ಒಬ್ಬ ನೈಜ ಮುಸ್ಲಿಮನಿಗೆ ತಿಳಿದಿದೆ. ಅವನು ತನ್ನ ಸೃಷ್ಟಿಗಳಿಗೆ ಶಾಂತಿಯನ್ನು ಬಯಸುತ್ತಾನೆ. ನೈಜ ಮುಸ್ಲಿಮರಲ್ಲಿ ಅಹ್ಮದಿಯರೇ ಈ ವಿಷಯದ ಬಗ್ಗೆ ಜ್ಞಾನ ಹೊಂದಿದವರಾಗಿದ್ದಾರೆ. ಅಲ್ಲಾಹನು ಮಾನವರಿಗೆ ಶಾಂತಿ ಮತ್ತು ಸಂರಕ್ಷಣೆ ನೀಡಲು ಮತ್ತು ಲೋಕದಲ್ಲಿ ಶಾಂತಿ ಸ್ಥಾಪಿಸಲು ಎಷ್ಟೆಲ್ಲಾ ಆಜ್ಞೆಗಳನ್ನು ನೀಡಿದ್ದಾನೆ. ಎಷ್ಟು ಹೆಚ್ಚು ಹೆಚ್ಚಾಗಿ ಮಾರ್ಗದರ್ಶನ ನೀಡಿದ್ದಾನೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಒಂದು ಸ್ಥಳದಲ್ಲಿ ಹೀಗೆ ಹೇಳಿದ್ದಾನೆ:

وَقِيلِهِ يَارَبِّ إِنَّ هَؤُلاَءِ قَوْمٌ لاَ يُؤْمِنُونَ
فَاصْفَحْ عَنْهُمْ وَقُلْ سَلاَمٌ فَسَوْفَ يَعْلَمُونَ

**ವ ಖೀಲಿಹೀ ಯಾರಬ್ಬಿ ಇನ್ನ ಹಾಉಲಾಯಿ ಖೌಮುನ್ ಲಾ ಯೂಮಿನೂನ್.**

**ಫಸ್‌ಫಹ್ ಅನ್‌ಹುಮ್ ವ ಖುಲ್‌ಸಲಾಮುನ್ ಫಸೌಫ ಯಅ್‌ಲಮೂನ್.**

(ಪ್ರವಾದಿ) ಹೇಳಿದರು: ಓ ನನ್ನ ಪ್ರಭೂ, ಈ ಜನರು ಸತ್ಯವನ್ನು ನಂಬುವುದಿಲ್ಲ. (ಆಗ ಅಲ್ಲಾಹನು ಹೇಳಿದನು) ನೀನು ಅವರಿಂದ ವಿಮುಖನಾಗು ಮತ್ತು ಶಾಂತಿ ಎಂದು ಮಾತ್ರ ಹೇಳು. ಅವರು ಬೇಗನೆ ಮನವರಿಕೆ ಮಾಡುವರು. (43: 89,90)

ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಹೀಗೆ ಆಜ್ಞಾಪಿಸಿದನು: ಇಸ್ಲಾಮಿನ ಶತ್ರುಗಳ ಎಲ್ಲ ವಿರೋಧ ಕೃತ್ಯಗಳನ್ನು ಸಹಿಸಿ ''ನಾನು ನಿಮಗೆ ಶಾಂತಿ ಮತ್ತು ಸುರಕ್ಷೆಯ ಸಂದೇಶವನ್ನೇ ನೀಡಲು ಬಯಸುತ್ತೇನೆ ಮತ್ತು ಲೋಕದಲ್ಲಿ ಶಾಂತಿ ಸ್ಥಾಪಿತವಾಗುವವರೆಗೆ ಈ ಸಂದೇಶ ನೀಡುತ್ತಾ ಇರುವೆನು'' ಎಂದು ಹೇಳಲು ಆಜ್ಞಾಪಿಸಿದನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಈ ಆಜ್ಞೆ ಅಲ್ಲಾಹನು ನೀಡಿರುವಾಗ ಪ್ರತಿಯೊಬ್ಬ ಮುಸ್ಲಿಮನಿಗೆ ಈ ಆಜ್ಞೆ ಆವಶ್ಯಕವಾಗಿಯೂ ಅನ್ವಯಿಸುತ್ತಿದೆ. ನಾವು ಇಂದು ಸಹ ಇಂದಿನ ಪರಿಸ್ಥಿತಿಯಲ್ಲಿ ಇದೇ ಸಂದೇಶ ಲೋಕಕ್ಕೆ ತಲಪಿಸುವುದು ನಮ್ಮ ಕಡ್ಡಾಯ ಕರ್ತವ್ಯವೆಂದು ಭಾವಿಸುತ್ತೇವೆ. ನಮ್ಮ ಕೆಲಸ ಶಾಂತಿ ಮತ್ತು ಸುರಕ್ಷೆಯ ಸಂದೇಶ ತಲಪಿಸುವುದಾಗಿದೆ. ಒಬ್ಬ ವಾಸ್ತವಿಕ ಮುಸ್ಲಿಮನ ಅಥವಾ ಕಾರುಣ್ಯವಂತನಾದ ಅಲ್ಲಾಹನ ದಾಸನ ಗುರುತು ಹೀಗೆಂದು ಅಲ್ಲಾಹನು ಹೇಳಿದ್ದಾನೆ:

إِذَا خَاطَبَهُمُ الْجَاهِلُونَ قَالُوا سَلَامًا

**ಇಝಾ ಖಾತಬಹುಮುಲ್ ಜಾಹಿಲೂನ ಖಾಲೂ ಸಲಾಮ.**

ಅಜ್ಞಾನಿಗಳಾದ ಜನರು ಅವರನ್ನು ಮಾತಿಗೆಳೆದರೆ ಅವರು 'ಸಲಾಂ' (ಶಾಂತಿ) ಎಂದು ಹೇಳುತ್ತಾರೆ. (25: 64). ಎಂದರೆ ಅಜ್ಞಾನಿಗಳಾದ ಜನರು ಜಗಳ ಮಾಡುವಾಗ ಅವರು ಜಗಳ ಮಾಡದೆ ಹೇಳುತ್ತಾರೆ ನಾವು ನಿಮಗೋಸ್ಕರ ಶಾಂತಿಯ ಪ್ರಾರ್ಥನೆ ಮಾಡುತ್ತೇವೆ ಎಂದು.

ಪವಿತ್ರ ಖುರ್‌ಆನಿನ ಉಪದೇಶ ಇದೇ ಆಗಿದೆ. ಪ್ರತಿಯೊಂದು ಹಂತದಲ್ಲಿ ಶಾಂತಿಯನ್ನು ಸ್ಥಾಪಿಸಬೇಕೆಂದು ಅದು ಹೇಳುತ್ತದೆ. ಅದಕ್ಕೋಸ್ಕರ ಪ್ರಯತ್ನ ಮಾಡಬೇಕೆಂದು ಅದು ಆಜ್ಞೆ ನೀಡುತ್ತದೆ. ನಮ್ಮಲ್ಲಿ ಪ್ರತಿಯೊಬ್ಬನು ಮತ್ತು ವಿಶಿಷ್ಟವಾಗಿ ಯುವಜನರು ಕೀಳರಿಮೆಗೆ ಪಾತ್ರರಾಗಬಾರದು. ಇಸ್ಲಾಮ್ ಮಾತ್ರ ಲೋಕದಲ್ಲಿ ಶಾಂತಿ ಮತ್ತು ಸುರಕ್ಷೆಯ ಖಾತರಿ ನೀಡಬಲ್ಲುದು. ಪವಿತ್ರ ಖುರ್‌ಆನ್ ಮಾತ್ರವೇ ಶಾಂತಿ ಮತ್ತು ಸುರಕ್ಷೆಯನ್ನು ಹರಡುವ ಉಪದೇಶ ನೀಡುತ್ತದೆ. ಭೀಕರವಾದವನ್ನು ಅಂತ್ಯಗೊಳಿಸುವ ಉಪದೇಶ ನೀಡುತ್ತಿದೆ.

ಪವಿತ್ರ ಖುರ್‌ಆನಿನ ಈ ಉಪದೇಶದ ಜ್ಞಾನ ಗಳಿಸುವುದು ಆವಶ್ಯಕವಾಗಿದೆ. ಈ ಉಪದೇಶವನ್ನು ಸ್ವಯಂ ತನ್ನಲ್ಲಿ ಅಳವಡಿಸುವ ಆವಶ್ಯಕತೆ ಇದೆ. ಈ ಉಪದೇಶಗಳ ಪ್ರಕಾರ ವರ್ತಿಸಿರಿ. ನಿಮ್ಮ ನಡವಳಿಕೆಗಳಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಹಾಗೆ ಲೋಕಕ್ಕೆ ತೋರಿಸಿಕೊಡಿರಿ– ಪವಿತ್ರ ಖುರ್‌ಆನನ್ನು ಸಂರಕ್ಷಿಸುವ ಭಾಗ್ಯ ಅಲ್ಲಾಹನು ನಮಗೆ ನೀಡಿದ್ದಾನೆಂದು ಮತ್ತು ಇದು ಅವನ ಅನುಗ್ರಹವೆಂದು. ಪವಿತ್ರ ಖುರ್‌ಆನಿನ ಸಂರಕ್ಷಣೆ ಎಂಬುದರ ಸರಿಯಾದ ವ್ಯಾಖ್ಯಾನ ಅದರ ಅರ್ಥಗಳ ಸಂರಕ್ಷಣೆಯೂ ಆಗಿದೆ. ಅದಕ್ಕೋಸ್ಕರ ಅಲ್ಲಾಹನು ಈ ಕಾಲಘಟ್ಟದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಳುಹಿಸಿದನು. ಅವರನ್ನು ನಂಬುವ ಭಾಗ್ಯ ಅಲ್ಲಾಹನು ನಮಗೆ ನೀಡುವ ಮೂಲಕ ಅಲ್ಲಾಹನು ನಮ್ಮನ್ನು ಈ ಕೆಲಸಕ್ಕೆ ಆಯ್ಕೆ ಮಾಡಿರುವನು. ಈಗ ಈ ಸುಂದರ ಉಪದೇಶಗಳನ್ನು ಲೋಕದಲ್ಲಿ ಹರಡುವುದು ಪ್ರತಿಯೊಬ್ಬ ಅಹ್ಮದಿಯ ಹೊಣೆಗಾರಿಕೆಯಾಗಿದೆ. ಈ ಹೊಣೆಗಾರಿಕೆ ಈಡೇರಿಸಲು ಪ್ರತಿಯೊಬ್ಬ ಅಹ್ಮದಿ ಬಾಲಕ, ಬಾಲಿಕೆ, ಪುರುಷ ಮತ್ತು ಮಹಿಳೆ ಪ್ರಯತ್ನ ಮಾಡಬೇಕು. ಲೋಕ ಈಗ ಅಗ್ನಿ ಕುಂಡದ ಸಮೀಪ ಯಾವ ಬದಿಯಲ್ಲಿ ನಿಂತಿದೆಯೋ ಅಲ್ಲಿಂದ ಅದು ಅದರೊಳಗೆ ಬೀಳಬಹುದಾದ ಪರಿಸ್ಥಿತಿ ಉಂಟಾಗಬಹುದಾಗಿದೆ. ಇಂತಹ ಸಮಯದಲ್ಲಿ ಲೋಕವನ್ನು ಅಗ್ನಿ ಕುಂಡದಲ್ಲಿ ಬೀಳುವುದರಿಂದ ರಕ್ಷಿಸುವ ಪ್ರಯತ್ನ ಮಾಡಿ ಶಾಂತಿ ಮತ್ತು ಸುರಕ್ಷೆ ನೀಡುವ ಕೆಲಸ ಮಾಡುವ ಹೊಣೆಗಾರಿಕೆ ಪ್ರತಿಯೊಬ್ಬ ಅಹ್ಮದಿಯ ಮೇಲಿದೆ. ಅಹ್ಮದಿಯರೇ ಈ ಕೆಲಸವನ್ನು ಮಾಡಬಲ್ಲವರಾಗಿದ್ದಾರೆ.

ಇದಕ್ಕೋಸ್ಕರ ಪ್ರಯತ್ನ ಮಾಡುವುದು ಆವಶ್ಯಕವಾಗಿದೆ. ಎಲ್ಲದಕ್ಕಿಂತಲೂ ಮುಖ್ಯವಾದುದು ಈ ಉದ್ದೇಶವನ್ನು ಈಡೇರಿಸಲು ಅಲ್ಲಾಹನೊಂದಿಗೆ ವಿಶಿಷ್ಟ ಸಂಬಂಧ ಸ್ಥಾಪಿಸಬೇಕು. ಅವನ ಮುಂದೆ ಬಾಗುತ್ತಾ ಇರಬೇಕು. ಅವನ ಬಗ್ಗೆ ಭಯಭಕ್ತಿ ಹೊಂದಬೇಕು. ಅವನ ಭಯಭಕ್ತಿ ನಮ್ಮ ಹೃದಯಗಳಲ್ಲಿ ಸೃಷ್ಟಿಸಬೇಕು. ಹಾಗೆ ಮಾಡಿದರೆ ನಾವು ನಮಗೆ ಮತ್ತು ನಮ್ಮ ಸಂತಾನಗಳಿಗೆ ಮತ್ತು ಲೋಕಕ್ಕೆ ಶಾಂತಿ ಮತ್ತು ಸುರಕ್ಷೆ ನೀಡಲು ಶಕ್ತರಾಗುವೆವು.

ಇಂತಹ ಸಂದರ್ಭಗಳಿಗೋಸ್ಕರ ಮತ್ತು ಇಂತಹ ಪರಿಸ್ಥಿತಿಗಳಿಗೋಸ್ಕರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದರು:

**ಆಗ್ ಹೈ ಪರ್ ಆಗ್ ಸೆ ಓ ಸಬ್ ಬಚಾಯೇ ಜಾಯೇಂಗೆ.**

**ಜೋ ಕೆ ರಖ್ತೇ ಹೈಂ ಖುದಾಯೆ ಝುಲ್ ಅಜಾಯಿಬ್‌ಸೆ ಪ್ಯಾರ್.**

ಅಗ್ನಿ ಇದೆ. ಆದರೆ ಅಗ್ನಿಯಿಂದ ಅವರೆಲ್ಲರೂ ರಕ್ಷಿಸಲ್ಪಡುವರು. ಯಾರು ಅದ್ಭುತಗಳನ್ನು ಹೊಂದಿದ ದೇವನನ್ನು ಪ್ರೀತಿಸುತ್ತಾರೋ ಅವರು.

ಆದುದರಿಂದ ಅದ್ಭುತಗಳನ್ನು ಹೊಂದಿರುವ ಸರ್ವಶಕ್ತಿಗಳ ಒಡೆಯನಾದ ಅಲ್ಲಾಹನೊಂದಿಗೆ ಸಂಬಂಧವನ್ನು ಬಲಪಡಿಸುವ ಆವಶ್ಯಕತೆ ಇದೆ. ಅಲ್ಲಾಹನನ್ನು ಪ್ರೀತಿಸುವುದರಲ್ಲಿ ವರ್ಧಿಸಲು ಪ್ರಯತ್ನಿಸಬೇಕಾಗಿದೆ. ಅಲ್ಲಾಹನು ನಮಗೆ ಹಾಗೆ ಮಾಡುವ ಭಾಗ್ಯ ನೀಡಲಿ. ಲೌಕಿಕ ಆಸಕ್ತಿಯ ಜನರಿಗೆ ಸಹ ಅಲ್ಲಾಹನು ಬುದ್ಧಿ ದಯಪಾಲಿಸಲಿ. ಅವರು ತಮ್ಮ ಸುಧಾರಣೆ ಮಾಡಲು ಪ್ರಯತ್ನಿಸಲಿ. ಮತ್ತು ವಿನಾಶದ ಹೊಂಡಕ್ಕೆ ಬೀಳುವುದರಿಂದ ರಕ್ಷಣೆ ಪಡೆಯಲಿ – ಆಮೀನ್.

(ಖುತ್‌ಬದ ಕೊನೆಗೆ ಹುಝೂರ್, ಒಂದು ನಮಾಝ್ ಜನಾಝ ಹಾಝಿರ್ ಮತ್ತು ಇಬ್ಬರು ಮೃತರಿಗೋಸ್ಕರ ನಮಾಝ್ ಗಾಯಿಬ್ ನಿರ್ವಹಿಸುವುದಾಗಿ ಹೇಳಿದರು. ಜನಾಝ ಹಾಝಿರ್ ಇನಾಯತುಲ್ಲಾಹ್ ಅಹ್ಮದಿ ಸಾಹೇಬರದಾಗಿತ್ತು. ಮೌಲವಿ ಬಶೀರ್ ಅಹ್ಮದ್ ಸಾಹೇಬ್ ಕಾಲಾ ಅಫ್‌ಗಾನ್ ದರ್ವೇಶ್ ಖಾದಿಯಾನ್ ಮತ್ತು ನೂರ್ ಹಾಸ್ಪಿಟಲ್ ಖಾದಿಯಾನಿನ ಇನ್‌ಚಾರ್ಜ್ ಡಾಕ್ಟರ್ ತಾರಿಖ್ ಅಹ್ಮದ್ ಸಾಹೇಬರ ತಾಯಿ ಖಾನಿತ ಬೇಗಮರ ಜನಾಝ ಗಾಯಿಬ್.

ಹುಝೂರರು ಮೃತರ ಬಗ್ಗೆ ಪ್ರಸ್ತಾಪಿಸಿ ಅವರ ಮಗ್‌ಫಿರತ್ ಮತ್ತು ಉನ್ನತ ಆಧ್ಯಾತ್ಮಿಕ ಪದವಿಗೋಸ್ಕರ ಪ್ರಾರ್ಥಿಸಿದರು.)

———————————*****———————————


***Friday Sermon delivered by Hadrath Khaleefatul Masih Al Khamis*** *(atba)*

*at Masjid Futhuh, London on 11-12-2015.*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by**:* M.P Ibrahim | ***Typing**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon